ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಮಗ್ರವಾದ ವರದಿಯನ್ನು ನಾನು ಸಂಬಂಧಪಟ್ಟ ಸಚಿವರಿಂದ ಕೊಡಿಸಿಕೊಡುತ್ತೇನೆ.

ಅಧ್ಯಕ್ಷರು:– ಆಯಿತು. ಮಾನ್ಯ ಚಲುವರಾಯಸ್ವಾಮಿಯವರೆ ತಾವು ಕೇಳಿ.

13. ವಿಷಯ: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರುಗಳ ಬೇಡಿಕೆಯನ್ನು ಈಡೇರಿಸುವ ಬಗ್ಗೆ.

ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ):– ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರುಗಳ ಬೇಡಿಕೆಯನ್ನು ಈಡೇರಿಸುವ ಸಲುವಾಗಿ ರಾಜ್ಯಾದ್ಯಂತ ಧರಣಿಯನ್ನು ಮಾಡುತ್ತಿದ್ದಾರೆ. ಅವರುಗಳ ಸಮಸ್ಯೆಯ ಬಗ್ಗೆ ದಯಮಾಡಿ ಸರ್ಕಾರವು serious ಆಗಿ ಗಮನಹರಿಸಿ salary ಯನ್ನು ಹೆಚ್ಚು ಮಾಡುವಂತಹದ್ದು ಆಗಬೇಕೆಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಸಚಿವರಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಸಚಿವರೆ, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಯ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ಸಂಬಂಧ ಉತ್ತರ ರೆಡಿ ಇದೆಯಾ?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನ ಹಾಗೂ ಹಿರಿಯ ನಾಗರೀಕ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಸಂಬಂಧ ಉತ್ತರ ರೆಡಿ ಇದೆ. ಅಂಗನವಾಡಿ ಕಾರ್ಯಕರ್ತೆಯರ ಮಾಸಿಕ ವೇತನ ಏರಿಸುವುದು ಮತ್ತು ಅಂಗನವಾಡಿಗಳನ್ನು ಖಾಸಗೀಕರಣ ಮಾಡಬಾರದೆಂಬ ವಿಷಯಗಳ ಬಗ್ಗೆ ಅವರುಗಳು ಪ್ರತಿಭಟನೆಯನ್ನು ಮಾಡುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಬೇಕಾದ ಸೇವಾ ಸೌಲಭ್ಯಗಳು ಮತ್ತಿತರೇ ಅಂಶಗಳ ಕುರಿತಂತೆ ಸಂಘಟನೆಯ ಪದಾದಿಕಾರಿಗಳೊಡನೆ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಲಾಗಿದೆ. ದಿನಾಂಕ 31.01.2015ರಂದು ನನ್ನ ಅಧ್ಯಕ್ಷತೆಯಲ್ಲಿ ಎಲ್ಲಾ ಸಂಘಟನೆಗಳ ಪದಾಧಿಕಾರಿಗಳ ಸಭೆಯನ್ನು ನಡೆಸಲಾಗಿದ್ದು ಮಂಡಿಸಲಾಗಿದ್ದ ಎಲ್ಲಾ ಬೇಡಿಕೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿದೆ. ಮುಂದುವರೆದು, ದಿನಾಂಕ: 02.02.2015ರಂದು ಅಂಗನವಾಡಿ ಕಾರ್ಯಕರ್ತೆಯರು ನಿರಶನ ನಡೆಸುತ್ತಿದ್ದ ಸ್ಥಳಕ್ಕೆ ನಾನು ಅಧಿಕಾರಿಗಳ ಜೊತೆ ಭೇಟಿ ನೀಡಿ ನೆರೆದಿದ್ದ ಕಾರ್ಯಕರ್ತೆಯರಿಗೆ ಇಲಾಖೆಯ ವತಿಯಿಂದ ತೆಗೆದುಕೊಳ್ಳಲಾಗಿರುವ ಕ್ರಮಗಳು ಹಾಗೂ ಬೇಡಿಕೆಗಳ ಪರಿಶೀಲನೆ/ಪರಿಹಾರ ಗಳ ಬಗ್ಗೆ ಕೂಲಂಕುಷವಾಗಿ ವಿಮರ್ಶಿಸಿರುತ್ತೇನೆ.

ಅಂಗನವಾಡಿ ಕಾರ್ಯಕರ್ತೆಯರು ಪ್ರಮುಖ ಬೇಡಿಕೆಗಳಾದ "ಅಂಗನವಾಡಿ ವ್ಯವಸ್ಥೆಯನ್ನು ಖಾಸಗೀಕರಣ ಮಾಡಬಾರದು ಮತ್ತು ಮಾಸಿಕವೇತನವನ್ನು ಕನಿಷ್ಠ ರೂ. 15,000/–ಗಳಿಗೆ ಏರಿಸುವ" ಕುರಿತಂತೆ ಕೆಳಕಂಡ ಮಾಹಿತಿಯನ್ನು ಒದಗಿಸಲಾಗಿದೆ.

(ಅ) ಐ ಸಿ ಡಿ ಎಸ್ ಖಾಸಗೀಕರಣ ಪ್ರಸ್ತಾವನೆ ಕೈಬಿಡುವುದು–

ಕೇಂದ್ರ ಪುರಸ್ಕೃತ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ 0–6 ವರ್ಷದ ಮಕ್ಕಳಿಗೆ, ಗರ್ಭಿಣಿ ಬಾಣಂತಿಯರಿಗೆ ಹಾಗೂ ಕಿಶೋರಿಯರಿಗೆ ಈಗಾಗಲೇ ನೀಡುತ್ತಿರುವ ಐ.ಸಿ.ಡಿ ಎಸ್ ಸೇವೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಅನುವಾಗುವಂತೆ ಪುನರ್ ರಚಿಸಲು ಹಾಗೂ ಬಲಪಡಿಸಲು ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ನು ಮಿಷನ್ ಮೋಡ್‌ನಲ್ಲಿ ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ. ಅದರಲ್ಲಿ ಶೇ.10 ರಷ್ಟು ಯೋಜನೆಗಳನ್ನು ಮಾತ್ರ ಸ್ವಯಂಸೇವಾ ಸಂಸ್ಥೆಗಳು ನಡೆಸಲು ಮಾರ್ಗಸೂಚಿಗಳಲ್ಲಿ ತಿಳಿಸಲಾಗಿದೆ. ಕೆಲವು ಸಂಸ್ಥೆಗಳು (ಉದಾಹರಣೆಗೆ– ಪ್ರಜಾಯತ್ನ ಸ್ವಯಂ ಸೇವಾ ಸಂಸ್ಥೆ, ಪ್ರಥಮ್ ಸ್ವಯಂ ಸೇವಾ ಸಂಸ್ಥೆ) ಅಂಗನವಾಡಿ ಕಾರ್ಯಕರ್ತೆಯರಿಗೆ

ಸಹಕಾರಿಯಾಗುವಂತೆ ಶಾಲಾ ಪೂರ್ವ ಶಿಕ್ಷಣವನ್ನು ನೀಡಲು ಸಹಕರಿಸುತ್ತಿದ್ದಾರೆ. ಇದು ಐಸಿಡಿಎಸ್ ಯೋಜನೆಯ ಪುನರ್ ರಚನೆಯೆ ಹೊರತು ಖಾಸಗೀಕರಣವಲ್ಲ.

ಖಾಸಗಿ ಸಂಸ್ಥೆಗಳಿಗೆ ಈ ಯೋಜನೆಯನ್ನು ವಹಿಸುವುದರಿಂದ ಐ.ಸಿ.ಡಿ.ಎಸ್. ಯೋಜನೆಯು ತನ್ನ ಅಸ್ಥಿತ್ವವನ್ನು ಕಳೆದುಕೊಳ್ಳುತ್ತದೆ ಎಂಬುದು ಕೆಲವು ಸಂಘಟನೆಗಳ ಅಭಿಪ್ರಾಯವಾಗಿದ್ದು, ಈ ವಿಷಯದ ಸಾಧಕ/ಬಾಧಕಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಮಾರ್ಗದರ್ಶನವನ್ನು ಪಡೆಯಲಾಗುವುದು.

(ಇ) ಮಾಸಿಕ ವೇತನವನ್ನು ಕನಿಷ್ಠ ರೂ.150,000/– ಗಳಿಗೆ ಏರಿಸುವುದು–

ಪ್ರಸ್ತುತ ಕೇಂದ್ರ ಸರ್ಕಾರದ ರೂ.3000/– ಹಾಗೂ ರಾಜ್ಯ ಸರ್ಕಾರದ ರೂ.2.500/– (ಒಟ್ಟು ರೂ.5.500/– ಗಳ ಗೌರವಧನವನ್ನು ಕಾರ್ಯಕರ್ತೆಯರಿಗೆ), ಕೇಂದ್ರ ಸರ್ಕಾರದ ರೂ.1.500/– ಹಾಗೂ ರಾಜ್ಯ ಸರ್ಕಾರದ ರೂ.1.250/– (ಒಟ್ಟು ರೂ.2.750/– ಗಳ ಗೌರವಧನವನ್ನು ಸಹಾಯಕಿಯರಿಗೆ), ಕೇಂದ್ರ ಸರ್ಕಾರದ ರೂ.2.250/– ಹಾಗೂ ರಾಜ್ಯ ಸರ್ಕಾರದ ರೂ.1250/– (ಒಟ್ಟು ರೂ.3.500/– ಗಳ ಗೌರವಧನವನ್ನು ಮಿನಿಅಂಗನವಾಡಿ ಕಾರ್ಯಕರ್ತೆಯರಿಗೆ) ನೀಡಲಾಗುತ್ತಿದೆ.

ಮೇಲಿನಂತೆ ಗೌರವಧನವು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಅನುದಾನಗಳನ್ನು ಒಳಗೊಂಡಿರುವುದರಿಂದ ಒಟ್ಟು ಗೌರವಧನದ ಮೊತ್ತವನ್ನು ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

ಅಂಗನವಾಡಿ ಕಾರ್ಯಕರ್ತೆಯರು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸುತ್ತಿರುವ ಸ್ಥಳಗಳಲ್ಲಿ ಇಲಾಖೆಯ ಯಾವುದೇ ಹಿರಿಯ ಅಧಿಕಾರಿಗಳು ಅವರ ಟೆಂಟ್ ಕಿತ್ತೆಸೆಯುವ, ಹೊಡೆದೋಡಿಸುವ ಯಾವುದೇ ಬೆದರಿಕೆಯನ್ನು ಹಾಕಿರುವುದಿಲ್ಲ. ಬೆಂಗಳೂರಿನಲ್ಲಿ ನಡೆಯುತ್ತಿರುವ ಧರಣಿ ಸ್ಥಳಕ್ಕೆ ನಾನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ನಿರ್ದೇಶಕರು ಹಾಗೂ ಹಿರಿಯ

ಅಧಿಕಾರಿಗಳ ಜೊತೆ ಅಂಗನವಾಡಿ ಕಾರ್ಯಕರ್ತೆಯರು/ಸಹಾಯಕಿಯರನ್ನು ಭೇಟಿ ಮಾಡಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿರುತ್ತೇನೆ.

ಶ್ರೀ ಚೆಲುವರಾಯಸ್ವಾಮಿ:– ಮಾನ್ಯ ಅಧ್ಯಕ್ಷರೆ, ಸರ್ಕಾರ ಅವರೇ ಅಲ್ಲವೇ? ಮಂತ್ರಿಗಳೇ ಸರ್ಕಾರವಾಗಿರುವುದರಿಂದ ದಯಮಾಡಿ ಅವರೇ ವೇತನ ಹೆಚ್ಚು ಮಾಡುವುದಕ್ಕೆ ರಾಜ್ಯ ಸರ್ಕಾರ at least ಸ್ವಲ್ಪ interest ತೋರಿಸಲಿ.

ಅಧ್ಯಕ್ಷರು:– ಈಗ ಚರ್ಚೆ ಸಾಕು, ಸೋಮಶೇಖರ್ ಮಾತನಾಡಿ.

ಶ್ರೀ ವೈ.ಎಸ್.ವಿ. ದತ್ತಾ:– ಸತ್ಯಾಗ್ರಹ ನಡೆಯುತ್ತಿರುವ ಕಡೆ ನಾವು ಯಾವುದೇ ಬೆದರಿಕೆ ಹಾಕಿಲ್ಲವೆಂದು ಹೇಳಿದ್ದೀರಿ. ಕಾರವಾರ DC office ನಲ್ಲಿ ಅವರಿಗೆಲ್ಲಾ ನೋಟೀಸ್ ಜಾರಿ ಮಾಡಿ ನಾಳೆ ಖಾಲಿ ಮಾಡಿಲ್ಲವೆಂದರೆ ನಿಮ್ಮನ್ನೆಲ್ಲ suspend ಮಾಡುತ್ತೇವೆಂದು ಹೆದರಿಸುತ್ತಿದ್ದಾರೆ. ಕಾರವಾರ DC office ಹತ್ತಿರ ಗಲಾಟೆ ಮಾಡುತ್ತಾರೆ. ಬೀದರ್ DC office ನಲ್ಲಿ ಅವರಿಗೆಲ್ಲಾ ಅಡ್ಡಿ ಮಾಡಿದ್ದಾರೆ. ಅವರಿಗೆಲ್ಲಾ ಸತ್ಯಾಗ್ರಹವನ್ನು ಶಾಂತಿಯುತವಾಗಿ ಮಾಡುತ್ತಿರುವಂಥ ಅಂಗನವಾಡಿ ಕಾರ್ಯಕರ್ತರಿಗೆ ಕಾರವಾರ ಹಾಗೂ ಬೀದರ್ DC office ನಲ್ಲಿ ತೊಂದರೆ ಮಾಡಿದ್ದಾರೆ. ಈ ಬಗ್ಗೆ ನನ್ನ ಹತ್ತಿರ ಮಾಹಿತಿ ಬಂದಿದೆ. ಇನ್ನೊಂದು ನೀವು mission mode ಹೇಳಿದ್ದೀರಿ. ದಯವಿಟ್ಟು ಅದರ ಬಗ್ಗೆ ಅಷ್ಟು ಸುಲಭವಾಗಿ ಕೈ ತೊಳೆದುಕೊಳ್ಳಬೇಡಿ. ಏನೆಂದರೆ ಆ mission mode ಒಳಗೆ ಎರಡು ಮುಖ್ಯವಾದ negative points ಇವೆ. ಆ negative points ಗೆ ರಾಜ್ಯ ಸರ್ಕಾರ ಬಹುಶಃ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ ಎಂದು ಅಂದುಕೊಂಡಿದ್ದೇನೆ. ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಆ ಎರಡು negative points ಅನ್ನು ಒಪ್ಪುವುದಿಲ್ಲವೆನ್ನುವುದನ್ನಾದರೂ ದಯವಿಟ್ಟು ನೀವು ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗುತ್ತದೆ.

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗ ಅವರೇನು ಕೆಲವು ಪ್ರಶ್ನೆಗಳನ್ನು ಕೇಳಿದರು, ಕೆಲವು ಹಿರಿಯ ಅಧಿಕಾರಿಗಳು ಎಂದು ಹೇಳಿದ್ದಾರೆ. Particular

ಆಗಿ ಇಂಥದ್ದು ಎನ್ನುವುದನ್ನು ಅವರು ಹೇಳಿರಲಿಲ್ಲ. ನಮ್ಮ ಇಲಾಖೆಯ ಅಧಿಕಾರಿಗಳಿಂದ ಆ ರೀತಿ ವರ್ತನೆ ನಡೆದಿಲ್ಲವೆಂದು ಹೇಳಿದ್ದೇನೆ. ಈಗ ಮಾನ್ಯ ಸದಸ್ಯರಾದ ದತ್ತರವರು DC ಯವರ ಕಡೆಯಿಂದ ಆಗಿದೆ ಎಂದು ಹೇಳಿರುವ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಆನಂತರ ಅದನ್ನು ಪರಿಶೀಲನೆ ಮಾಡುತ್ತೇನೆ. ಎರಡನೆಯದಾಗಿ ICDS programme ನಲ್ಲಿ negative points ಇದೆ ಎಂದು ಹೇಳಿದ್ದಾರೆ, ಅದರ ಬಗ್ಗೆ ನಾನು ಈಗಾಗಲೇ ಚರ್ಚೆ ಮಾಡಿದ್ದೇನೆ. ಹಾಗಾಗಿ ಕೇಂದ್ರ ಸರ್ಕಾರದ ಜೊತೆಯಲ್ಲಿಯೂ ಕೂಡ ಇದು ಅವರಿಗೆ ಆತಂಕ ಉಂಟುಮಾಡುವಂಥದ್ದು ಹಾಗೂ ಅವರಿಗೆ ತೊಂದರೆಯಾಗುವಂಥ ವಿಷಯವೆಂದು ಅವರೇನು ಹೇಳುತ್ತಿದ್ದಾರೆ, ಅದನ್ನು ಕೇಂದ್ರ ಸರ್ಕಾರದ ಜೊತೆ ನಾನು ಕೂಡ ಸಂಪರ್ಕ ಮಾಡಿ ಅದರ ಬಗ್ಗೆ ಅವರಿಗೆ ಮನವರಿಕೆ ಮಾಡಿಕೊಡುವಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತ:– 15,000–00 ರೂಪಾಯಿಗಳಿಗೆ ಕೇಂದ್ರ ಸರ್ಕಾರ ಒಪ್ಪುವುದಿಲ್ಲ, ನೀವು ಸ್ವಲ್ಪ ಜಾಸ್ತಿ ಮಾಡಿ.

ಅಧ್ಯಕ್ಷರು:– ಸೋಮಶೇಖರ್ ಹೇಳಿ, ದತ್ತ don't misuse. No. Resume. ಅವರ ಮಾತನ್ನು record ಮಾಡಬೇಡಿ. ಸಚಿವರು ಉತ್ತರ ಹೇಳಬೇಡಿ. ಅದು close ಆಗಿದೆ. ಸೋಮಶೇಖರ್ ಮಾತನಾಡಿ.